Govt. of Karnataka [C.R.P. 67

Deposition Sheets (R.P. No. 57) Form No. 4 (Criminal)

**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಮಧುಗಿರಿ**

ಪ್ರಕರಣ ಸಂಖ್ಯೆಃ **2372/2023**

| ದಿನಾಂಕಃ **19-12-2025** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು. | | | |
|---|---|---|---|
| ಸಿಡಬ್ಲ್ಯೂಃ | 5 | ಪಿಡಬ್ಲ್ಯೂ | 3 |
| ಹೆಸರು | ರಂಗಧಾಮಯ್ಯ | | |
| ತಂದೆ / ಗಂಡನ ಹೆಸರು | ಲೇಟ್ ರಂಗಯ್ಯ | | |
| ವಯಸ್ಸು | 63 ವರ್ಷ | | |
| ಉದ್ಯೋಗ | ನಿವೃತ್ತ ಅಬಕಾರಿ ಉಪ ನಿರೀಕ್ಷಕರು | | |
| ವಾಸ | ತುಮಕೂರು | | |

ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದಃ

ದಿಃ 26.01.2021 ರಿಂದ 31.07.2023 ರವರೆಗೆ ನಾನು ಬಡವನಹಳ್ಳಿ ಪೊಲೀಸ್ ಠಾಣೆಯಲ್ಲಿ ಅಬಕಾರಿ ವಲಯ ಕಛೇರಿಯಲ್ಲಿ, ಅಬಕಾರಿ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 13.04.2023 ರಂದು ದೂರವಾಣಿ ಮೂಲಕ ಕಚೇರಿಗೆ ಬಂದ ಮಾಹಿತಿ ಸುದ್ದೇಗುಂಟೆ ಗ್ರಾಮದ ಸಿದ್ದೇಶ್ ಎನ್ನುವವರು ಮಾರಾಟಕ್ಕಾಗಿ ಮದ್ಯವನ್ನು ಸಂಗ್ರಹಣೆ ಮಾಡಿದ್ದಾರೆಂದು ಮಾಹಿತಿ ಬಂದಿದ್ದು ಅದರಂತೆ ಇಲಾಖಾ ವಾಹನದಲ್ಲಿ ನಾನು, ನಮ್ಮ ಸಿಬ್ಬಂದಿಯವರೊಂದಿಗೆ ಸುದ್ದೇಗುಂಟೆ ಗ್ರಾಮಕ್ಕೆ ಹೋಗಿ. ಇಬ್ಬರು ಪಂಚರಿಗೆ ವಿಚಾರ ತಿಳಿಸಿ ಅವರನ್ನು ನಮ್ಮ ಜೊತೆಯಲ್ಲಿ ಕರೆದುಕೊಂಡು ಸುದ್ದೇಗುಂಟೆ ಸಿದ್ದೇಶ್ ರವರ ಮನೆಯ ಹತ್ತಿರ ಹೋಗಿ ನೋಡಲಾಗಿ ಮನೆಯಲ್ಲಿ ಸಿದ್ದೇಶ್ ರವರು ಅಲ್ಲಿಯೇ ಇದ್ದು, ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಗಾಬರಿಗೊಂಡಿರುತ್ತಾರೆ. ಅವರಿಗೆ ಬಂದ ವಿಚಾರವನ್ನು ತಿಳಿಸಿರುತ್ತೇವೆ. ಮನೆಯನ್ನು ಶೋದನೆ ಮಾಡಲು ಅವಕಾಶ ಕೊಡಿ ಎಂದು ಕೇಳಿಕೊಂಡಿರುತ್ತಾರೆ, ಅದಕ್ಕೆ ಅವರು ಒಪ್ಪಿಕೂಂಡಿರುತ್ತಾರೆ. ಸ್ಥಳದಲ್ಲಿ ಶೋಧನಾ ವಾರಂಟ್

ತಯಾರು ಮಾಡಿಕೊಂಡು ಅಂಗಶೋದನೆ ಮಾಡಿಕೊಂಡು, ಪಂಚರ ಸಮಕ್ಷಮ ಮನೆಯಲ್ಲಿ ಶೋಧನೆ ಮಾಡಲಾಗಿ ಮನೆಯ ಹಾಲ್ ನಲ್ಲಿ ಚೀಲದಲ್ಲಿ ಮದ್ಯದ ಟೆಟ್ರಾ ಪ್ಯಾಕ್ ಗಳು ಇರುವುದು ಕಂಡು ಬಂದಿರುತ್ತವೆ. ಸದರಿ ಚೀಲದಲ್ಲಿ 90 ಎಂ ಎಲ್ ನ 192 ಓರಿಜಿನಲ್ ಚಾಯ್ಸ್ ವಿಸ್ಕಿ ಟೆಟ್ರಾ ಪ್ಯಾಕೆಟ್ ಗಳು ಇರುವುದು ಕಂಡು ಬಂದಿರುತ್ತದೆ. ಆಸಾಮಿಯನ್ನು ಮದ್ಯ ಸಂಗ್ರಹಣೆ ಮಾಡಲು ಪರವಾನಗೆ ಇರುತ್ತದೆಯೋ ಎಂದು ಕೇಳಲಾಗಿ, ಅವರು ಯಾವುದೇ ಪರವಾನಗೆ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ನಂತರ ಸ್ಥಳದಲ್ಲಿ ಮಧ್ಯಾಹ್ನ 4-00 ರಿಂದ 5-30 ಗಂಟೆಯವರೆಗೆ ಮಹಜರ್ ಜರುಗಿಸಿ ಮು.ಮಾಲ ಗಳನ್ನು ವಶಕ್ಕೆ ತೆಗೆದುಕೊಂಡಿರುತ್ತೇನೆ. ಅವುಗಳಲ್ಲಿ ಎಫ್ ಎಸ್ ಎಲ್ ಗಾಗಿ 90 ಎಂ ಎಲ್ ನ 192 ಓರಿಜಿನಲ್ ಚಾಯ್ಸ್ ವಿಸ್ಕಿ ಟೆಟ್ರಾ ಪ್ಯಾಕೆಟ್ ಗಳಲ್ಲಿ 30 ಟೆಟ್ರಾ ಪ್ಯಾಕ್ ಗಳನ್ನು ಪ್ರತ್ಯೇಕವಾಗಿ ಸೀಲ್ ಮಾಡಿ ತಗೆದುಕೊಳ್ಳಲಾಯಿತು

ನಂತರ ಠಾಣೆಗೆ ಹಾಜರಾಗಿ ಠಾಣಾ ಮೊ.ನಂ.41/2022-23 ರಂತೆ ಪ್ರಕರಣ ದಾಖಲು ಮಾಡಿ ಪ್ರ.ವ.ವ ಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ 6 ರವರಿಗೆ ಪ್ರಕರಣದ ಕಡತವನ್ನು ವರ್ಗಾವಣೆ ಮಾಡಿರುತ್ತೇನೆ.

ಸಾಕ್ಷಿಯು ಮಹಜರ್, ಶೋದನಾ ವಾರಂಟ್, ಮಾದರಿ ಸೀಲ್ ನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-1 ರಿಂದ 3 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಸಿ), ರಿಂದ 3(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ.ವ.ವ ಯನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುಸಲಾಯಿತು. ಸಾಕ್ಷಿಯು ಮು.ಮಾ ನ್ನು ನೋಡಿ ಗುರ್ತಿಸಿದ್ದು ಅದನ್ನು ಎಂ.ಓ-1 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಹೆಚ್ ಆರ್ ವಕೀಲರಿಂದಃ

ನಮಗೆ ದೂರವಾಣಿಯಿದ ಮಾಹಿತಿಯು 4 ಗಂಟೆಗೆ ಬಂದಿರುತ್ತದೆ. ಮಾಹಿತಿದಾರರ ಹೆಸರು ವಿವರ ನಮಗೆ ಹೇಳಿರುವುದಿಲ್ಲ. ನಾವು ಠಾಣೆಗೆ 4 ಗಂಟೆಗೆ ಬಿಟ್ಟಿರುತ್ತೇವೆ. ಠಾಣೆಯಿಂದ ಸುದ್ದೇಗುಂಟೆ ಗ್ರಾಮಕ್ಕೆ ಸುಮಾರು 45 ಕಿ.ಮೀ ಅಂತರವಿದೆ ಎಂದರೆ ಸರಿ. ಸುದ್ದೇಗುಂಟೆ ಗ್ರಾಮಕ್ಕೆ 4-35 ಕ್ಕೆ ಘಟನಾ ಸ್ಥಳ ಕ್ಕೆ ಹೋಗಿರುತ್ತೇವೆ. ಊರಿನಿಂದ ಆರೋಪಿ ಮನೆ ಒಂದು ಪರ್ಲಂಗ್

ದೂರವಿರುತ್ತದೆ. ಘಟನಾ ಸ್ಥಳ ಕ್ಕೆ ಊರಿನ ಸುಮಾರು 15 ಜನರು ಸೇರಿದ್ದರು ಎಂದರೆ ಸರಿ. ಅವರ ಹೆಸರು ವಿವರವನ್ನು ನಾನು ತಿಳಿದುಕೊಂಡಿರುವುದಿಲ್ಲ. ಸುದ್ದೇಗುಂಟೆ ಗ್ರಾಮಸ್ಥರನ್ನೇ ಪಂಚರನ್ನಾಗಿ ಮಾಡಿಕೊಂಡಿರುತ್ತೇವೆ. ಪಂಚಸಾಕ್ಷಿದಾರರು ಸುದ್ದೇಗುಂಟೆ ಗ್ರಾಮದವರಲ್ಲ ಎಂದರೆ ಸರಿಯಲ್ಲ. ಬಿಳಿ ಪ್ಲಾಸ್ಟಿಕ್ ಚೀಲವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ಮು. ಮಾ ಗಳ ಬ್ಯಾಚ್ ನಂಬರ್, ಸೀರಿಯಲ್ ನಂಬರ್ ಮತ್ತು ಉತ್ಪಾದನಾ ದಿನಾಂಕ ನಮೂದಿಸಿರುವುದಿಲ್ಲ. ಕಾರಣ ಮು.ಮಾಲುಗಳ ವಿವರ ಅವುಗಳಲ್ಲಿ ಇರುವುದಿಲ್ಲ. ಘಟನಾ ಸ್ಥಳದ ಚೆಕ್ಕುಬಂದಿ ನನಗೆ ನೆನಪಿಲ್ಲ. ನಾವು ಸ್ಥಳ ಹೋಗಿಲ್ಲ ಮಹಜರ್ ಮಾಡಿಲ್ಲ ಠಾಣೆಯಲ್ಲೇ ಸೃಷ್ಟಿ ಮಾಡಿಕೊಂಡು ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆರೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಮಧುಗಿರಿ.